ಮರುಕವಂತೆ. ಹಾಗೆ ಮರುಕ ತೋರುವವರೆಂದರೆ ನನಗೆ ಇಷ್ಟವಿಲ್ಲ. ಹೊಸ ಸ್ಕೂಲು ಮಕ್ಕಳೊಂದಿಗೆ ನನಗೆ ಗೆಳೆತನ ಬೇಡ. ಅವರೂ ಮರುಕಗೊಂಡರು. ನನಗೆ ಹಿಡಿಸಲಿಲ್ಲ. ಯಾರ ಗೆಳೆತನವೂ ಬೇಡ. ನಾನು ಚೆನ್ನಾಗಿ ಓದಿಕೊಂಡು ಕ್ಲಾಸಿನಲ್ಲಿ ಮುಂದಿರಬೇಕು ಎಂದುಕೊಂಡೆ. ರೂಢಿಯಾಗಿಬಿಟ್ಟಿದೆ ಅಮ್ಮನಿಲ್ಲದೆ ಇರುವುದು. ಆದರೆ, ಅಮ್ಮನನ್ನು ಮರೆಯಲಾರೆನಲ್ಲವೇ! ಕನ್ನಡಿಯಲ್ಲಿ ನೋಡಿಕೊಂಡಾಗಲೆಲ್ಲಾ ನೆನಪಾಗುತ್ತಾಳೆ. ನನ್ನ ಗುಂಗುರು ಕೂದಲು, ನನ್ನ ಕಣ್ಣಪಾಪೆಗಳು, ನನ್ನ ಮೈಬಣ್ಣ ಎಲ್ಲವೂ ಅಮ್ಮನದೇ ಅಲ್ಲವೇ? ಅಷ್ಟಕ್ಕೂ ಆ ದಿನ ನಾನು ಸ್ಕೂಲಿಗೆ ಹೋಗದೆ ಇದ್ದರೆ ಅಮ್ಮ ಮನೆಯಿಂದ ಹೋಗುತ್ತಿರಲಿಲ್ಲವೇನೋ.

ಆ ದಿನ ಗೇಟಿನ ಬಳಿ ನಿಂತು ಕೈಬೀಸಿ ಕಳಿಸಿದ್ದಳು.

ಅತ್ತೆ, ಅಪ್ಪ, ನಾನು ಹೊಸ ಊರಿಗೆ, ಹೊಸ ಮನುಷ್ಯರಿಗೆ, ಹೊಸ ಸ್ಕೂಲಿಗೆ ಒಗ್ಗಿಕೊಳ್ಳುತ್ತಿದ್ದಾಗ, ಅಪ್ಪ ಒಂದು ವಾರದ ಮಟ್ಟಿಗೆ ಎಲ್ಲಿಗೋ ಹೋದ. ಹೋಗುವ ಮುನ್ನ ಒಂದು ಸರವನ್ನೂ, ಒಂದು ಜೊತೆ ಬಳೆಗಳನ್ನೂ (ಅಮ್ಮನವು) ಅತ್ತೆಗೆ ಕೊಟ್ಟು ನನಗೆಂದು ತೆಗೆದಿಡಲು ಹೇಳಿದ. ಅತ್ತೆಯ ಮುಖ ಏಕೋ ದಿಗಿಲುಗೊಂಡಿತ್ತು. ಊರಿನಿಂದ ಅಪ್ಪನ ಜೊತೆ ಯಾರೋ ಒಬ್ಬಾಕೆ ಬಂದಿದ್ದಳು, ದೊಡ್ಡ ಸೂಟ್‌ಕೇಸ್ ಹಿಡಿದು.

ಆಕೆಯನ್ನು "ಅಮ್ಮನೆಂದುಕೋ" ಎಂದ ಅಪ್ಪ. 'ಸತ್ತರೂ ಅಂದುಕೊಳ್ಳೋದಿಲ್ಲ' ಎಂದು ಮನದಲ್ಲಿ ತೀರ್ಮಾನಿಸಿದೆ. ಅತ್ತೆ ಒಂದು ದಿನ ಬ್ಯಾಗಿನಲ್ಲಿ ಬಟ್ಟೆ ಜೋಡಿಸಿಕೊಳ್ಳುತ್ತಿದ್ದಳು. "ಎಲ್ಲಿಗೆ ಅತ್ತೆ?" ಎಂದರೆ, "ನಮ್ಮನೆಗೆ" ಎಂದಳು. ನಾನು ಅವಳನ್ನು ತಬ್ಬಿಕೊಂಡು ನಾನೂ ಬರುವೆನೆಂದು ಅತ್ತೆ. "ಸ್ಕೂಲ್ ಹಾಳಾಗುತ್ತೆ, ಬೇಡ" ಎಂದ ಅಪ್ಪ. ಅಮ್ಮನಿಗಾಗಿ, ಅತ್ತೆಗಾಗಿ ಚಿಂತೆಗೀಡಾಗಿ ಮತ್ತೊಮ್ಮೆ ಜ್ವರ ತಂದುಕೊಂಡೆ. ಸತ್ತುಬಿಡಬೇಕೆನಿಸಿತು. ಅತ್ತೆ ಬಂದು ನನ್ನನ್ನು ಕರೆದೊಯ್ದಳು. ನಾನು ಅವಳಿಗೆ ಅಂಟಿಕೊಂಡುಬಿಟ್ಟೆ. ಅತ್ತೆ ತಾನಿದ್ದ ಊರಲ್ಲೇ ನನ್ನನ್ನು ಸ್ಕೂಲಿಗೆ ಸೇರಿಸಿದಳು. ಊಟ ಮುಗಿಸಿ ಕೈಯೊರೆಸಿಕೊಳ್ಳಲು ರುಮಾಲು ತೆಗೆದುಕೊಳ್ಳುತ್ತಿದ್ದರೆ ತನ್ನ ಸೆರಗು ಚಾಚಿದಳು. ತಿಂದ ತಟ್ಟೆ ತೆಗೆದು ಸಿಂಕಿನಲ್ಲಿ ಹಾಕುತ್ತಿದ್ದಾಗ "ನಾನಿಲ್ಲವೇನು?" ಎಂದಳು. ನನ್ನ ತಲೆ ಬಾಚಲು ಮೆತ್ತನೆಯ ಬಾಚಣಿಗೆ ಕೊಂಡು ತಂದಳು.

ವಾರ ವಾರ ಸೀಗೆಕಾಯಿ ಪುಡಿಯಿಂದ ತಲೆ ಸ್ನಾನ ಮಾಡಿಸಿದಳು. ಸಿನಿಮಾಗೆ ಕರೆದೊಯ್ದಳು. ತನ್ನ ಬದಿಯಲ್ಲಿ ಮಲಗಿಸಿಕೊಂಡಳು. ಆದರೂ ನಾನು ತಲೆಗೆ ಎಣ್ಣೆ ಹಚ್ಚಿದ ಮೇಲೆ ತಲೆ ಸ್ನಾನದ ಹೊತ್ತಿಗೆ ಸುಲಭಕ್ಕೆ ಸಿಗದಂತೆ ಅಮ್ಮನನ್ನು ಅಲೆಸಿದಂತೆ ಅತ್ತೆಯನ್ನು ಮನೆ ಸುತ್ತಲೂ ಓಡಿಸಲಾರೆ. ಊಟಕ್ಕೆ ಬಾ ಎಂದು ಕೂಗಿದರೆ ಇಗೋ ಬಂದೆ ಎಂದು ಹೊರಗೆ ಪರಾರಿ ಆಗಲಾರೆ. ಹಾಲು ಕುಡಿದ ಗ್ಲಾಸನ್ನು ಕಿಟಕಿಯಲ್ಲಿ ಎಸೆದು ಅಮ್ಮನಿಗೆ ಹುಸಿಗೋಪ ತರಿಸಿದಂತೆ ಅತ್ತೆಗೆ ತರಿಸಲಾರೆ. ಅತ್ತೆಗೆ ಕೋಪ ಬಂದರೆ ಮತ್ತೆ ಅಪ್ಪನ ಬಳಿಗೆ, 'ಅಮ್ಮನೆಂದುಕೊಳ್ಳಲು ಹೇಳಿದ ಆಕೆ'ಯ ಬಳಿಗೆ ಕಳಿಸಿಬಿಡುತ್ತಾಳೇನೋ ಅನಿಸಿ ಅವಳು ಹೇಳಿದಂತೆ ಕೇಳುತ್ತೇನೆ. ಕೆಟ್ಟ ಕನಸು ಬಿದ್ದಾಗಲೋ, ಗುಡುಗಿನ ಸದ್ದಾದಾಗಲೋ, ಕರೆಂಟು ಹೋದಾಗಲೋ ಅವಳ ಪಕ್ಕದಲ್ಲಿ ನುಸುಳಬೇಕೆಂದು ಹತ್ತಿರ ಹೋಗುತ್ತಲೇ ಹಿಂದಕ್ಕೆ ಸರಿದುಬಿಡುತ್ತೇನೆ. ಅವಳೇ ನನ್ನನ್ನು ಬೆಸೆದುಕೊಳ್ಳುತ್ತಾಳೆ. ಅಮ್ಮನೆಂದುಕೊಳ್ಳೆಂದು ಅಪ್ಪ ಕರೆತಂದಿದ್ದಾಕೆ ನೆನಪಾಗಿ ಅತ್ತೆಗೆ ಇನ್ನಷ್ಟು ಹತ್ತಿರವಾಗಿ ಸರಿಯುತ್ತೇನೆ. ಅಮ್ಮನ ಸ್ಪರ್ಶ ಇಲ್ಲದಿದ್ದರೂ ಅತ್ತೆಯ ಸ್ಪರ್ಶ ಪರವಾಗಿಲ್ಲ ಎನಿಸುತ್ತದೆ.

"ತಾಯಿಲ್ಲದ ಮಗಳನ್ನ ಇಷ್ಟು ಚೆನ್ನಾಗಿ ಯಾರು ಬೆಳಸ್ತಾರೆ" ಎನ್ನುತ್ತಿದ್ದರು ಎಲ್ಲರೂ. ಹೌದಲ್ಲ ಅಂದುಕೊಳ್ಳುತ್ತಿದ್ದೆ. ಅತ್ತೆಗೆ ಕೋಪ ತರಿಸಬಾರದೆಂದು ಎಲ್ಲರೂ ಹೇಳುತ್ತಿದ್ದರು. ಹೌದಲ್ಲವೇ ಮತ್ತೆ. ಸ್ಕೂಲಿಗೆ ಕಳಿಸುತ್ತಾಳೆ. ಅತ್ತೆ ಒಳ್ಳೆಯವಳೇ. ಆದರೆ, ಅಮ್ಮನನ್ನು ಮಾತ್ರ ಯಾವಾಗಲೂ ಬಯ್ಯುತ್ತಲೇ